## ನವಿಲುಗನ್ನಡಿ

- ಫೆಬ್ರುವರಿ ಸಂಚಿಕೆಯ ಮುಖಪುಟ ಆತ್ಯಾಕರ್ಷಕ. ಯಾವುದೇ ಸಾಹಿತ್ಯ ಪರಂಪರೆ, ನಾಡುನುಡಿಯ ಘನತೆ ಮತ್ತು ವಿವೇಕದ ಅಭಿವ್ಯಕ್ತಿ ಎನ್ನುವುದರಲ್ಲಿ ಸಂಶಯವೇ ಇಲ್ಲ. ದೇವು ಪತ್ತಾರರ 'ಬೇಂದ್ರೆ ಬರೆಯದ ಪುಸ್ತಕಗಳು' ಲೇಖನ ವಿಚಾರಪೂರ್ಣವಾಗಿತ್ತು.

**ಶಂಕರನಾರಾಯಣ ಭಟ್, ಮಾಡಗೇರಿ**

- ಇರಾನ್ ಕವಿ ರೋಝಾ ಜಮಾಲಿ ಸಂದರ್ಶನ, ಕುಮಾರವ್ಯಾಸ ಭಾರತ ಅನುವಾದದ ಅನುಭವಗಳು, ಲಲಿತ ಮಂಟಪ, ಕಲೀಮ್ ಉಲ್ಲಾ ಅಂಕಣ, 'ಸಾಂಗತ್ಯಕ್ಕೊಂದು ಹೆಸರು ಬೇಕೆ?' (ಆನಂದ್ ಋಗ್ವೇದಿ)ಕಥೆಗಳನ್ನೊಳಗೊಂಡ ಸಂಚಿಕೆ ಸಮೃದ್ಧವಾಗಿತ್ತು.

**ರಂಗಸ್ವಾಮಿ ಎಂ.ಜಿ., ಹಿರಿಯೂರು**

- ಕವಿ ದ.ರಾ. ಬೇಂದ್ರೆ ಕುರಿತು ದೇವು ಪತ್ತಾರ ಅವರ ಲೇಖನ ಸಮಸ್ತ ಮಾಹಿತಿಯನ್ನು ಒದಗಿಸಿತು. ಸಾಹಿತ್ಯ ರುಚಿಯಂತೆ ಶುಚಿಯು ಬೇಕೂ ಅನ್ನುವ ಬೇಂದ್ರೆ ಕಾವ್ಯ ಕಣಜ ಮನ ಸೆಳೆಯಿತು.

**ರಾಜೇಂದ್ರ ಹೆಗಡೆ, ಹಾವೇರಿ**

- ಫಾತಿಮಾ ರಲಿಯಾ ಅವರ ಲೇಖನ 'ಕಿವಿಯ ಬಳಿಯೇ ದುಡಿ ಬಾರಿಸುವ ಚೋಮ' ಓದುವಾಗ ನಮ್ಮ ಕಿವಿಯಲ್ಲೂ ದುಡಿ ಬಾರಿಸಿದ ಸದ್ದು ಕೇಳಿದಂತಾಯ್ತು. ಹಳೇ ಸಿನಿಮಾ ನೋಡಿದ ನೆನಪು ಮರುಕಳಿಸಿತು.

**ಅಂಬಿಕಾ ಚಿಟಗೇರಿ, ವಿಜಯಪುಟ**

- ಸಮುದ್ಯತಾ ವೆಂಕಟ್ರಾಮು ಅವರ 'ತಡಿಯೆಂದರೆ ಬರಿ ತಡಿಯಲ್ಲವೊ' ಪ್ರಬಂಧ ಬಹುಪಾಲು ನನ್ನ ಅನುಭವವೂ ಆಗಿರುವುದರಿಂದ ಆಪ್ತವೆನಿಸಿತು. ಉಷಾ ನರಸಿಂಹನ್ ಅವರ `ಮೆಂಟಲ್ ಬ್ಲಾಕ್' ಸತ್ಯಕ್ಕೆ ಹಿಡಿದ ಕನ್ನಡಿ. ಎಲ್ಲಾ ದುಡಿಯುವ ಮಹಿಳೆಯರ ಪಾಡು.

**ಎ.ವಿ. ಮುರಳೀಧರ, ತೀರ್ಥಹಳ್ಳಿ**




- 'ಕಲೆ ಜನರನ್ನು ಮುಟ್ಟುವಂತಿರಬೇಕು...' ಮೋಹಿನಿಯಾಟ್ಟಂಗೆ ಹೊಸಹುಟ್ಟು ನೀಡಿದ ಕಲಾವಿದೆ, ಸಂಶೋಧಕಿ, ಗುರು ನಿರ್ಮಲಾ ಪಣಿಕರ್ ಮಾತುಕತೆ (ಸಂದರ್ಶನ: ಕೋಡಿಬೆಟ್ಟು ರಾಜಲಕ್ಷ್ಮಿ) ಓದುವಂತಿತ್ತು.

**ಜಯತೀರ್ಥ ಶ್ರೀಪತಿ, ಹುಬ್ಬಳ್ಳಿ**

- ಕರೀಗೌಡ ಬೀಚನಹಳ್ಳಿ ಅವರ 'ಹಳೆಮನೆ' ಕಥೆ ಸಿದ್ದೇಗೌಡ ಚಿನ್ನವ್ವರ ಮಕ್ಕಳು ಮನೆ ಪಾಲುಮಾಡಿಕೊಂಡ ರೀತಿ, ಸಮುದ್ಯತಾ ವೆಂಕಟ್ರಾಮು ಅವರ ತಡಿಯ ಬಗೆಗಿನ ಪ್ರಬಂಧದ ನವಿರು ಶೈಲಿ ಮನಸ್ಸಿಗೆ ಮುದ ನೀಡಿತು.

**ರವಿ ಯಲಿಗಾರ, ಮುನವಳ್ಳಿ**

- ಅಕ್ಷಯ ಕಾಂತಬೈಲು ಅವರ 'ಜನ್ಮದ ಜನ್ಮ' ಕವಿತೆ ಇಷ್ಟವಾಯಿತು. ಜೀವವೊಂದು ಮಣ್ಣೊಳಗೆ ಹುಟ್ಟಿ ಮಣ್ಣಾಗುವುದರೊಳಗೆ ನೆಲೆಯಾಗುವ ನಿಲುವುಗಳು ಕವಿತೆಯ ಅಂತರ್ಯ ಎನಿಸುತ್ತದೆ.

**ನಾಗರಾಜ ಬಿ. ನಾಯ್ಕ, ಹುಬ್ಬಣಗೇರಿ**

- ಮೋದೂರು ತೇಜ ಅವರ 'ಪ್ರಕ್ಷುಬ್ಧಗೊಂಡ ಕಡಲು' ಕಥೆಯಲ್ಲಿ ಲೇಖಕರು ಈಗಲೂ ಜೀವಂತ ಇರುವ ಅಸ್ಪೃಶ್ಯತೆಯನ್ನು ನವಿರು ಭಾಷೆಯಲ್ಲಿ ಕಟ್ಟಿಕೊಟ್ಟಿದ್ದಾರೆ. ಜನಪದರ ಶೈಲಿಯ ಭಾಷೆಯ ಬಳಕೆ ಮನೋಜ್ಞವಾಗಿದೆ.

**ರಾಜಶೇಖರ ಕೆ.ವಿ., ಮುಳಬಾಗಿಲು**